ಶ್ರೀ ಎಸ್. ಕರಿಯಪ್ಪ.—ಪ್ರಾಥಮಿಕ ಶಾಲೆಗಳಲ್ಲಿ ಐದನೆಯ ತರಗತಿಯಿರುವಕಡೆ, ಹಿಂದಿನ ವರ್ಷ 5 ನೆಯ ತರಗತಿ ಕೊಟ್ಟಿರುವ ಕಡೆ ವರ್ಷೇ ವರ್ಷೇ ಒಂದೊಂದು ತರಗತಿಯನ್ನು ಹೆಚ್ಚಿಸಿ ಎಂಟನೆಯ ತರಗತಿಯವರೆಗೂ ಕೊಡುತ್ತೀರಾ ?

ಶ್ರೀ ವಿ. ವೆಂಕಟಪ್ಪ.—ಅವಶ್ಯಕತೆಯಿದ್ದರೆ ಕೊಡಲೇಬೇಕು.

ಶ್ರೀ ಎಸ್. ಕರಿಯಪ್ಪ.—ಈಗ ಐದನೆಯ ತರಗತಿಯಿಂದ ಪ್ರಾರಂಭಿಸ ಬೇಕೆಂದಿರುವ ಪ್ರಾಥಮಿಕ ಶಾಲೆಗಳ ಪಟ್ಟಿಯನ್ನು ತಯಾರಿಸಿದ್ದೀರಾ ?

ಶ್ರೀ ವಿ. ವೆಂಕಟಪ್ಪ.—ತಯಾರಿಸಿದ್ದಾರೆ.

ಶ್ರೀ ಎಸ್. ಕರಿಯಪ್ಪ.—ಕನಕಪುರ ತಾಲ್ಲೂಕು ಮತ್ತು ವಿರೂಪಾಕ್ಷಿಪುರ ಹೋಬಳಿಯ ವಿಷಯವೂ ಅದರಲ್ಲಿದೆಯೆ ?

ಶ್ರೀ ವಿ. ವೆಂಕಟಪ್ಪ.—ತಾವು ಆ ಸಮಾಚಾರವನ್ನು ಪ್ರಶ್ನೆಯಲ್ಲಿ ಕೇಳಿಲ್ಲ.

ಶ್ರೀ ಎಸ್. ಕರಿಯಪ್ಪ.—ಈ ಪ್ರಾಥಮಿಕ ಶಾಲೆಗಳಲ್ಲಿ ಪ್ರತಿವರ್ಷವೂ ಒಂದೊಂದು ಶಾಲೆಯನ್ನು ಹೀಗೆ ಸೇರಿಸುವುದಕ್ಕೆ ಬದಲಾಗಿ ಒಂದೇ ಸಾರಿ ಎಂಟು ತರಗತಿಗಳಿರುವ ಶಾಲೆಗಳನ್ನು ಕೊಡಬೇಕೆಂದು ಇಲಾಖೆಯಿಂದ ಶಿಫಾರ್ಸು ಬಂದಿಲ್ಲವೆ ?

ಶ್ರೀ ವಿ. ವೆಂಕಟಪ್ಪ.—ಬಂದಿಲ್ಲ.

Rules governing Ministe s' tour

Q.—241. Sri M. RAMAPPA (Harihar).—

Will the Government be pleased to state :—

whether there are any rules or circulars governing the tours of Ministers ?

A.—Sri S. NIJALINGAPPA.—(Chief Minister).—

There are no rules or circulars by which these tours are governed, But the tours are undertaken only when warranted by public interest.

ಶ್ರೀ ಎಂ. ರಾಮಪ್ಪ.—" ಮಂತ್ರಿಗಳ ಪ್ರವಾಸದ ಬಗ್ಗೆ ಯಾವ ನಿಬಂಧವೂ ಇಲ್ಲ. " ಎಂದು ಉತ್ತರ ಕೊಡಲಾಗಿದೆ. ತಮ್ಮ ಇಲಾಖೆಗಳಿಗೆ ಸಂಬಂಧ ಪಟ್ಟ ವಿಷಯಗಳ ಪರಿಶೀಲನೆಗೆ ಮಾತ್ರ ಪ್ರವಾಸ ಮಾಡಬೇಕೆಂದು ನಿರ್ಬಂಧವಿದೆಯೆ ?

*ಶ್ರೀ ಎಸ್. ನಿಜಲಿಂಗಪ್ಪ.—ಪ್ರವಾಸ ಮಾಡುವಾಗ ಎಲ್ಲ ಇಲಾಖೆಗಳಿಗೂ ಸಂಬಂಧಪಟ್ಟಿರುವ ವಿಷಯಗಳನ್ನು ಪರಿಶೀಲಿಸಬಹುದು.

ಶ್ರೀ ಎಂ. ರಾಮಪ್ಪ.—ಪ್ರವಾಸದ ಬಗ್ಗೆ ನಿರ್ಬಂಧವಿಲ್ಲದಿರುವುದರಿಂದ ಮಂತ್ರಿಗಳು ತಿಂಗಳಿಗೆ ಎರಡು ಮೂರು ಸಾವಿರ ರೂಪಾಯಿಗಳ ವರೆಗೆ ಟಿ. ಎ. ತೆಗೆದು ಕೊಂಡಿರುವುದು ಗಮನಕ್ಕೆ ಬಂದಿದೆಯೆ ?

ಶ್ರೀ ಎಸ್. ನಿಜಲಿಂಗಪ್ಪ.—ಆವಶ್ಯಕತೆ ಬಿದ್ದಾಗ ಹಾಗೆ ಮಾಡಿರಬಹುದು. ಅವಶ್ಯಕತೆ ಕಂಡುಬಂದಾಗ ಹೋಗಲೇ ಬೇಕು.

ಶ್ರೀ ಎಂ. ರಾಮಪ್ಪ.—ಇಷ್ಟೇ ಟಿ. ಎ. ಪಡೆಯ ಬೇಕೆಂದು ನಿರ್ಬಂಧವಿಲ್ಲವೆ ? ಹೀಗೆ 2-3 ಸಾವಿರ ರೂಪಾಯಿಗಳ ಪ್ರಯಾಣ ಭತ್ಯವನ್ನು ಒಂದೇ ತಿಂಗಳಲ್ಲಿ ಪಡೆಯಬಹುದೆ ?

ಶ್ರೀ ಎಸ್. ನಿಜಲಿಂಗಪ್ಪ.—ನನಗೆ ತಿಳಿದ ಹಾಗೆ ಈಗ ಯಾರೂ ಅಷ್ಟನ್ನು ತೆಗೆದುಕೊಂಡಿರುವುದು ಕಂಡು ಬಂದಿಲ್ಲ.

ಶ್ರೀ ಎಂ. ರಾಮಪ್ಪ.—ಮಂತ್ರಿಗಳು ಪ್ರವಾಸ ಕಾಲದಲ್ಲಿ ಪ್ರೈವೇಟ್ ಗೆಸ್ಟ್ ಕ್ವಾರ್ಟರುಗಳಲ್ಲಿ ಇರ ಕೂಡದು ಎಂದು ಮುಖ್ಯಮಂತ್ರಿಗಳು ನಲಹೆ ಕೊಟ್ಟಿದ್ದರೂ, ಕೆಲವರು ಆ ರೀತಿಯೇ ಇನ್ನೂ ಇರುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಒಂದು ಸಂದರ್ಭದಲ್ಲಿ ಆ ವಿಚಾರ ತಿಳಿಯದೆ ಹೊಗಿದ್ದೂ ಉಂಟು. ಅದು ಪ್ರೈವೇಟ್ ಗೆಸ್ಟ್ ಕ್ವಾರ್ಟರ್ಸ್ ಏನೂ ಅಲ್ಲ ಎಂದು ನನ್ನ ಸ್ನೇಹಿತರು ಹೇಳಿದರು.

Sri G. VENKATAI GOWDA.—Is there any proposal under contemplation to frame rules by which these things may be governed ?

Sri S. NIJALINGAPPA.—There is no necessity at all to frame rules.

ಶ್ರೀ ಬಿ. ಎಸ್. ಶಂಕರಪ್ಪ.—ಮಾರ್ಚ್ ತಿಂಗಳು 4,5,6 ನೆ ತಾರೀಖುಗಳಲ್ಲಿ ಮುಖ್ಯ ಮಂತ್ರಿಗಳೂ ಮತ್ತು ಹಣಕಾಸಿನ ಮಂತ್ರಿಗಳೂ ಹೊಸದುರ್ಗ ತಾಲ್ಲೂಕಿನಲ್ಲಿ ಪ್ರವಾಸ ಮಾಡಿದಾಗ್ಗೆ ಯಾವ ಸಾರ್ವಜನಿಕ ದೃಷ್ಟಿಯಿತ್ತೆಂಬುದನ್ನು ಸರ್ಕಾರದವರು ತಿಳಿಸುವುದಕ್ಕಾಗುತ್ತದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದಕ್ಕೆ ಬೇರೆ ಪ್ರಶ್ನೆ ಕೇಳಿ, ಉತ್ತರ ಹೇಳುತ್ತೇನೆ.

ಶ್ರೀ ಎಂ. ರಾಮಪ್ಪ.—ಮಂತ್ರಿಗಳ ಪ್ರವಾಸದ ಬಗ್ಗೆ ನಿಯಮಗಳನ್ನು ಮಾಡುವುದರಿಂದ ಮಂತ್ರಿಗಳಿಗೇನಾದರೂ ಕಷ್ಟವಾಗುತ್ತದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಏನೂ ಕಷ್ಟವಾಗುವುದಿಲ್ಲ. ಎಲ್ಲಿಗೂ ಅವಶ್ಯಕತೆ ಇಲ್ಲದೆ ಎಂದೂ ಪ್ರವಾಸ ಮಾಡುವುದಿಲ್ಲ.

ಶ್ರೀ ಎಂ. ರಾಮಪ್ಪ.—ಮಂತ್ರಿಗಳು ಹರಿಹರಕ್ಕೆ ಪ್ರವಾಸ ಮಾಡಿದಾಗ ಕಲೆಕ್ಟೊರೇಟ್ ಪ್ರವಾಸ ಮಂದಿರದಲ್ಲಿ ಇಳಿದುಕೊಳ್ಳುವುದಕ್ಕೆ ಏನಾದರೂ ತಾವು ನಲಹೆಯನ್ನು ಕೊಟ್ಟಿದ್ದರೇ ?

ಶ್ರೀ ಎಸ್. ನಿಜಲಿಂಗಪ್ಪ.—ಇಲ್ಲ.

Sri C. K RAJIAH SETTY.—Is the Government aware that the Ministers are addressing Party mettings when they go on tours ?

Sri S. NIJALINGAPPA.—They do visit Congress offices and meet members and know what the public view is. They have to understand one another. It is very necessary.

Sri C. K. RAJAIAH SETTY.—Are they not going at Government cost ?

Sri S. NIJALINGAPPA.—They are going at Government cost. There is nothing wrong in addressing and meeting members of the party. I wish members of the other parties also meet

the Ministers when they are on tour.

Sri C. K. RAJAIAH SETTY.—Is the Government aware that such a thing is prohibited in England ?

Sri S. NIJALINGAPPA.—I do not think there is any such prohibition.

Sri G. VENKATAI GOWDA.—Is it not better that Ministers confine their tours only to less developed areas of the State, Sir ?

Sri S. NIJALINGAPPA.—Every area is less developed from our point of view.

ಶ್ರೀ ಎ. ಆರ್. ಬದರಿ ನಾರಾಯಣ್.—ಪ್ರವಾಸಗಳನ್ನು ಮಾಡುವುದೇನಾನರೂ ಮಂತ್ರಿಗಳಿಗೆ ಹಿತವೇ ?

ಶ್ರೀ ಎಸ್. ನಿಜಲಿಂಗಪ್ಪ.—ಹಿತ ಇದ್ದರೇನೆ ಪ್ರವಾಸ ಹೋಗುವುದು. ಇಲ್ಲದಿದ್ದರೆ ಪ್ರವಾಸ ಹೋಗುವುದಿಲ್ಲ.

ಶ್ರೀ ಎ. ಆರ್. ಬದರಿ ನಾರಾಯಣ್.—ಪ್ರವಾಸ ಮಾಡತಕ್ಕದ್ದು ಬಹಳ ಕಷ್ಟವಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಪ್ರವಾಸ ಮಾಡುವುದು ಅತಿಕಷ್ಟ. ಆದರೂ ಕರ್ತವ್ಯ ದೃಷ್ಟಿಯಿಂದ ಪ್ರವಾಸ ಹೋಗಲೇ ಬೇಕಾಗುತ್ತದೆ.

Sri J. H. SHAMSUDDIN.—Is it not the duty of the Ministers to keep themselves in touch with their constituencies by these tours ?

Sri S. NIJALINGAPPA.—Yes. certainly.

Inadequacy of Accommodation in Mangalore Port.

Q.—459. Dr. K. NAGAPPA ALVA (Panemangalore).—

Will the Government be pleased to state :—

whether they are aware of the inadequate accommodation at Mangalore port for goods that arrive for import and export which have to be stocked pending loading in the steamer ?

A.—Sri B. VAIKUNTA BALIGA (Minister for Labour and Legal Affairs).—

No.

Dr. K. NAGAPPA ALVA.—May I know Sir, whether any representation was given to the Minister when he toured this district regarding this difficulty ?

Sri B. VAIKUNTA BALIGA.—Sir, there were representations on this and several other points which have been examined. Ports have come to us for the first time and the problem has to be tackled now in all its aspects.

Dr. K. NAGAPPA ALVA.—May I request the Hon'ble Minister and the Government to take necessary action in the immediate future, since great difficulty is felt in this matter ?

Sri B. VAIKUNTA BALIGA.—Government will take all necessary action and as early as possible.

Expenditure on Kolache anicut in Ramdurg Taluk.

Q.—257. Sri M. S. PATTAN (Ramdurg).—

Will the Government be pleased to state :—

(*a*) the expenditure incurred so far towards the construction of a dam across the Malaprabha river (otherwise known as Kolache Anicut) in Ramdurg taluka ;

(*b*) the reasons for delay in the excavation of canals ;

(*c*) the acreage proposed to be irrigated at present ;

(*d*) the names of villages which will have irrigation facilities ;

(*e*) the proportionate relief sanctioned by them to owners whose lands were acquired for canal excavation work ?

A.—Sri H. K. VEERANNA GOWDH (Minister for Public Works).—

(*a*) Expenditure on the first stage up to end of May 1957 is 33·49 lakhs.

(*b*) There has been no undue delay in the excavation of the canals.

(*c*) 2,000 acres during this Kharif Season and 3,652 acres ultimately.

(*d*)—

1	Huligop.	6	Sangal
2	Gonnagur.	7	Maradgi
3	Suriban.	8	Hampiholi
4	Manihal.	9	Lakhamapur
5	Aurvadi.	10	Belleri.

(*e*) The total amount of compensation can be known only after the awards are passed by the Land Acquisition Officer in all cases.